# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಲಗ್ಗೆರೆ ಉಪವಿಭಾಗ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, ಝಿನ್ ಪಾರ್ಕ್ ಕಾಂಪೌಂಡ್, ನಾಗರಬಾವಿ 2ನೇ ಹಂತ, ಬೆಂಗಳೂರು–560 072

## ವಾರ್ಡ್ ಸಂಖ್ಯೆ 69 ರಲ್ಲಿ ದಿನಾಂಕ:–06.02.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ ನಾಗೇಶ್ ಮೂರ್ತಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
2. ಶ್ರೀ.ಕೃಷ್ಣಮೂರ್ತಿ, ಸಹಾಯಕ ಕಂದಾಯ ಅಧಿಕಾರಿ,
3. ಶ್ರೀ.ರೋಹಿತ್.ಜೆ ಸಹಾಯಕ ಅಭಿಯಂತರರು
4. ಶ್ರೀ.ರಾಜೇಂದ್ರ ಪ್ರಸಾದ್, ಮೌಲ್ಯಮಾಪಕರು,
5. ಶ್ರೀ.ಅನಂತ ಪದ್ಮನಾಭ, ಕಂದಾಯ ಪರಿವೀಕ್ಷಕರು
6. ಶ್ರೀ.ರಂಗನಾಥ್, ಕಂದಾಯ ವಸೂಲಿಗಾರರು.
7. ಶ್ರೀ.ಮಂಜುನಾಥ್, ಮಾರ್ಷಲ್
8. ಶ್ರೀ ವರದರಾಜು, ಕಿ.ಅ.ಪ, ವಾರ್ಡ್ ನಂ.69.
9. ಸದಸ್ಯರುಗಳು.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ರಚಿಸಲು ಸಭೆಯಲ್ಲಿ ಚರ್ಚಿಸಲಾಗಿದ್ದು ಹಾಗೂ ಈ ಕೆಳಕಂಡ ಎಂಟು ಜನರನ್ನು ಸಮಿತಿಯ ಸದಸ್ಯರನ್ನಾಗಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

| ಕ್ರಸಂ | ಪ್ರದೇಶ | ಸದಸ್ಯರ ಹೆಸರು | ನಾಗರೀಕ ಕಲ್ಯಾಣ ಸಂಘದ ಹೆಸರು |
|---|---|---|---|
| 1 | ಕೆಂಪೇಗೌಡ ಬಡಾವಣೆ | ಸಿದ್ದೇಗೌಡ ಹೆಚ್.ಎಸ್ | ಸಾಮಾಜಿಕ ಕಾರ್ಯಕರ್ತರು |
| 2 | ಲಗ್ಗೆರೆ | ಶ್ರೀಮತಿ ಗಾಯತ್ರಿ ಎನ್.ಜಿ | ಸ್ತ್ರೀ ಶಕ್ತಿ ಸಂಘದ ಅಧ್ಯಕ್ಷರು |
| 3 | ಮುನಿಬಚ್ಚಮ್ಮ ಆಶ್ರಮ | ಶ್ರೀ ರಾಜಗೋಪಾಲ ಎ | ಸ್ವಯಂ ಸೇವಾ ಸಂಘದ ಕಾರ್ಯಕರ್ತರು. |
| 4 | ಮುನೇಶ್ವರ ಬಡಾವಣೆ | ಶ್ರೀ ನಿರಂಜನ್ ಆರ್ | ಸ್ವಯಂ ಸೇವಾ ಸಂಘದ ಕಾರ್ಯಕರ್ತರು. |
| 5 | ಲಗ್ಗೆರೆ | ಶ್ರೀ ಶ್ರೀನಿವಾಸ | ಸಾಮಾಜಿಕ ಕಾರ್ಯಕರ್ತರು |
| 6 | ಲಗ್ಗೆರೆ ಗ್ರಾಮ | ಶ್ರೀ ಜಿ ಬೋರಯ್ಯ | ಸಾಮಾಜಿಕ ಕಾರ್ಯಕರ್ತರು |
| 7 | ಎಫ್ ಎಫ್ ಬಡಾವಣೆ | ಶ್ರೀ ಪ್ರಕಾಶ್ | ಸಾಮಾಜಿಕ ಕಾರ್ಯಕರ್ತರು |
| 8 | ಕೆಂಪೇಗೌಡ ಬಡಾವಣೆ | ಶ್ರೀ ಬಾಬು | ಸಾಮಾಜಿಕ ಕಾರ್ಯಕರ್ತರು |
| 9 | ಕೆಂಪೇಗೌಡ ಬಡಾವಣೆ | ಶ್ರೀಮತಿ.ಕಾಂಚನಾ | ಸಾಮಾಜಿಕ ಕಾರ್ಯಕರ್ತರು |

ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸುವ ವಿಚಾರ.

1. ವಾರ್ಡ್ ವ್ಯಾಪ್ತಿಗೆ ಸಂಬಂಧಪಟ್ಟ ನರಸಿಂಹಸ್ವಾಮಿ ಬಡಾವಣೆ, ಎಲ್.ಜಿ.ರಾಮಣ್ಣ ಬಡಾವಣೆ ಮತ್ತು ಹಳೇವೂರಿನ ಸುತ್ತ ಮುತ್ತಲಿನ ರಸ್ತೆಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ತಿಳಿಸಿರುತ್ತಾರೆ.
2. ವಾರ್ಡ್ ವ್ಯಾಪ್ತಿಗೆ ಸಂಬಂಧಪಟ್ಟ ಭೈರವೇಶ್ವರನಗರ 1,2, ಮತ್ತು 3ನೇ ಅಡ್ಡರಸ್ತೆಗಳ ಮೋರಿಗಳಲ್ಲಿ ಸ್ಲಿಲ್ಟ್ ತೆಗೆಯುವಂತೆ ತಿಳಿಸಿರುತ್ತಾರೆ.
3. ವಾರ್ಡ್‌ಗೆ ಸಂಬಂಧಪಟ್ಟ ಪ್ರೀತಿನಗರದಲ್ಲಿ ಓ.ಎಫ್.ಸಿ ಅಳವಡಿಕೆಯ ಬಾಕ್ಸ್‌ಗಳನ್ನು ಮುಚ್ಚುವಂತೆ ತಿಳಿಸಿರುತ್ತಾರೆ.

ವಾರ್ಡ್ ವ್ಯಾಪ್ತಿಯಲ್ಲಿನ ಬೆಸ್ಕಾಂ ಮತ್ತು ಬಿ.ಡಬ್ಲೂ.ಎಸ್.ಎಸ್.ಬಿ ಬಗ್ಗೆ ಚರ್ಚಿಸುವ ವಿಚಾರ.

1. ವಾರ್ಡ್ ವ್ಯಾಪ್ತಿಗೆ ಸಂಬಂಧಪಟ್ಟಂತೆ ಬೆಸ್ಕಾಂ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿ ರವರುಗಳು ಮುಂದಿನ ಸಭೆಗೆ ಕಡ್ಡಾಯವಾಗಿ ಸಭೆಗೆ ಹಾಜರಾಗುವುದು. ಇಲ್ಲವಾದಲ್ಲಿ ನೋಟೀಸ್ ಜಾರಿ ಮಾಡಲಾಗುವುದು.

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 69 ಲಗ್ಗೆರೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ. 69 ಲಗ್ಗೆರೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ